Message from the Chairman L. C.— Announcement

MADAM SPEAKER.— I have received the following message from the Chairman, Legislative Council :—

" As required by rule 106 of the Rules of Procedure and Conduct of Business in the Karnataka Legislative Council I send herewith the Karnataka Municipal Corporation Bill, 1976 which has been agreed to by the Legislative Council today without amendments. "

The Bill has already been passed by the Legislative Assembly.

Supplementary Estimates for 1976-77

(Governor's Recommendation)

MADAM SPEAKER.—I have received the following recommendation from the Governor.

" As required by Article 205(1) of the Constitution of India, I Uma Shankar Dikshit, Governor of Karnataka, do hereby direct that the schedule of additional demands for the year 1976-77 (from 1st April, 1976 to 31st March 1977), first Instalment, shall be laid before the House of Legislature."

PRESENTATION

SRI M. Y. GHORPADE.— I present the Supplementary Estimates 1976-77 (I Instalment) as required under Article 205 (i) of the constitution of India.

MADAM SPEAKER.— The Supplementary Estimates 1976-77 (I Instalment) presented.

KARNATAKA CO-OPERATIVE SOCIETIES (THIRD AMENDMENT) BILL, 1976.

INTRODUCTION

SRI K: H. RANGANATH:—I beg leave of the house to introduce the Karnataka Co-operative Societies (Third Amendment) Bill, 1976,

MADAM SPEAKER.— I will put it to the vote of house. The question is ;

" That leave be granted to introduce the Karnataka Co-operative Societies (Third Amendment, Bill, 1976. "

The Motion was adopted and the leave was granted.

SRI K.H. RANGANATH.— I beg to introduce the Bill.

MADAM SPEAKER.— The Bill is introduced. **

KARNATAKA PRESERVATION OF TREES BILL, 1976.

Motion to Consider—(Debate Contd.)

† ಶ್ರೀ ಸಿ. ಬೈರೇಗೌಡ. (ವೇಮಗಲ್).— ಮಾನ್ಯ ಅಧ್ಯಕ್ಷಣೀಯವರೇ, ನಾನು ನಿನ್ನೆಯದಿವಸ ಮಾತನಾಡುತ್ತಾ ಅರಣ್ಯವನ್ನು ಹೇಗೆ ಉಳಿಸಬೇಕು ಎನ್ನುವುದು ಬರೀ ಪುಸ್ತಕದಲ್ಲಿ ಉಳಿದಿದೆ ಎನ್ನುವುದನ್ನು ಸ್ವಲ್ಪ ಮಟ್ಟಿಗೆ ಹೇಳಿದ್ದೆ. ನಾನು ಇದರ ಬಗ್ಗೆ ಇನ್ನೂ ಅನೇಕ ವಿವರಗಳನ್ನು ಹೇಳಬೇಕಾದದ್ದು ಇದೆ. ಈ ಸದನದ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಈ ಇಲಾಖೆಯ ಬಗ್ಗೆ ಕೆಲವೊಂದು ನ್ಯೂನತೆಗಳನ್ನು ಕಂಡುಹಿಡಿದು ಸರ್ಕಾರಕ್ಕೆ ತನ್ನ ವರದಿಯನ್ನು ಕೊಟ್ಟಿದೆ. ಸಮಿತಿಯ ಎದುರಿಗೆ ಬಂದಂಥ ಕೆಲವು ಮಾಹಿತಿಗಳ ಪ್ರಕಾರ ಈ ರಾಜ್ಯದಲ್ಲಿ ಒಂದು ಕೂಪು ಒಂದರಲ್ಲಿಯೇ ಸುಮಾರು ೨೨ಲಕ್ಷ ರೂಪಾಯಿಗಳಷ್ಟು ಹಣದ ದುರ್ವ್ಯವಹಾರ ನಡೆದಿದೆ. ಅಲ್ಲಿರತಕ್ಕ ಡಿವಿಷನಲ್ ಫಾರೆಸ್ಟ್ ಅಧಿಕಾರಿ ಕೂಪನ್ನು ಪಡೆದಿರತಕ್ಕ ಕಂಟ್ರಾಕ್ಟರ್ ಅವರೊಂದಿಗೆ ಸೇರಿ ೨೨ಲಕ್ಷ ರೂಪಾಯಿಗಳ ದುರ್ವ್ಯವಹಾರ ನಡೆಸಿದ್ದಾರೆ. ಈ ಟಿಂಬರ್‌ಗೆ ಮಾರ್ಕೆಟ್ ಬೆಲೆ ಕಟ್ಟಿದರೆ ನನ್ನ ಅಂದಾಜಿನಲ್ಲಿ ಸುಮಾರು ೫೦ಲಕ್ಷ ರೂಪಾಯಿಗಳಾದರೂ ಈ ಒಂದು ವ್ಯವಹಾರದಲ್ಲಿ ದುರುಪಯೋಗವಾಗಿದೆ. ಈ ಸದನದಲ್ಲಿರತಕ್ಕ ಎಲ್ಲಾ ರಾಜಕೀಯಪಕ್ಷಗಳ ಸದಸ್ಯರೂ ಕೂಡ ಈ ಸಮಿತಿಯಲ್ಲಿದ್ದಾರೆ. ಅವರು ಈಗ ತಮ್ಮದೇ ಆದ ಒಂದು ಯುನಾನಿಮಸ್ ರಿಪೋರ್ಟನ್ನು ಸಹ ಸರ್ಕಾರಕ್ಕೆ ಕೊಟ್ಟಿದ್ದಾರೆ. ಇದರ ಬಗ್ಗೆ ತಾವು ತೀವ್ರವಾಗಿ ತನಿಖೆ ಮಾಡಬೇಕು. ಯಾರು ಆಲ್ಲಿ ತಪ್ಪಿತಸ್ಥರು ಇದ್ದಾರೆ ಅವರಿಗೆ ಉಗ್ರವಾದಂಥಶಿಕ್ಷೆಆಗಬೇಕು.ಆದರೆ ಇವತ್ತಿನದಿವಸ ಪ್ರಜಾಪ್ರಭುತ್ವವನ್ನು ಉಳಿಸತಕ್ಕ ಹಾಗೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕ ತಮಗೆ ಮಾನ ಮರ್ಯಾದೆ ಇದ್ದರೆ ನಾವು ಕೊಟ್ಟಂಥ ವರದಿಯ ಮೇಲೆ ತಾವು ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ ಮತ್ತು ತೆಗೆದುಕೊಳ್ಳದೇ ಇರುವುದಕ್ಕೆ ಕಾರಣ ಏನು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಇದು ಯಾವುದಕ್ಕೂ ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತಿಲ್ಲ. ಇದಕ್ಕೆ ಕಾರಣವೆಂದರೆ ಯಾರು ಭ್ರಷ್ಟ ಅಧಿಕಾರಿಗಳಿದ್ದಾರೆ. ಯಾರು ಭ್ರಷ್ಟಾಚಾರವನ್ನೇ ತಮ್ಮ ಕಸುಬನ್ನಾಗಿ ಮಾಡಿಕೊಂಡಿದ್ದಾರೋ ಅಂತಹವರ ಜೋಬಿನಲ್ಲಿ ಇವರು ವಾಸವಾಗಿದ್ದಾರೆ.ಇಂತಹ ಒಂದು ದುರ್ವ್ಯವಹಾರ ಇಲ್ಲಿನಡೆದಿದೆ.ಜೊತೆಗೆ ಮೈಸೂರು ಜಿಲ್ಲೆಹಾಗೂ ಇನ್ನಿತರ ಜಿಲ್ಲೆಗಳಲ್ಲಿರತಕ್ಕಂಥ ಅರಣ್ಯ ಭೂಮಿಯನ್ನು ಅನೇಕ ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿರತಕ್ಕಂಥ ಮಂಂದಾಳಂಗಳು ತಮ್ಮ ಹೆಸರಿಗೆ ಮಾಡಿಕೊಂಡಿರುವುದೇ ಅಲ್ಲದೇ ಮತ್ತೆ ಕೆಲವರು ಮತ್ತೊಬ್ಬರಿಗೆ ಮಾರಾಟವನ್ನು ಸಹ ಮಾಡಿದ್ದಾರೆ. ಇಂತಹವರ ಮೇಲೆ ಕ್ರಮ ಕೈಕೊಳ್ಳದಿರುವುದಕ್ಕೆ ಕಾರಣವೇನು ? ಇದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಮಸೂದೆಯಂ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ವ್ಯವಸಾಯಗಾರರಿಗೆ ಕಂಟಕಪ್ರಾಯವಾಗಿದೆ. ಕ್ಲಾಸ್ ೨ರಲ್ಲಿ ಮರ ಎನ್ನುವುದಕ್ಕೆ ಡೆಫಿನಿಷನ್ ಕೊಟ್ಟಿದ್ದಾರೆ :—

> 'tree' means any woody plant whose branches spring from and are supported upon a trunk or body and which trunk or body is not lessthan 5.5 centimetress in diamater.....

ಎಂದು ಇಲ್ಲಿ ಹೇಳಿದ್ದಾರೆ. ಈಗ ಕೋಲಾರ ಮತ್ತು ಇತರ ಜಿಲ್ಲೆಗಳಲ್ಲಿ ದಾ ಕ್ಷಿ ಗಿಡಗಳನ್ನೂ ಬೆಳೆಸುತ್ತಾರೆ. ಆ ಗಿಡಗಳ ಬುಡವು ಕೆಲವು ವರ್ಷಗಳ ನಂತರ ೨೦ ರಿಂದ ೩೦ಸೆಂಟಿಮೀಟರ್‌ವರೆಗೆ ಬೆಳೆದಿರುತ್ತವೆ ಮತ್ತು ಕೆಲವು ವರ್ಷಗಳ ನಂತರ ಆ ಗಿಡಗಳನ್ನು ತೆಗೆದು ಹೊಸ ಗಿಡಗಳನ್ನು ಬೆಳೆಸಬೇಕಾಗುತ್ತದೆ. ಅಂತಹ ಸಮಯದಲ್ಲಿ ಈ ಮಸೂದೆಯಲ್ಲಿ ಹೇಳಿರುವಂತೆ ಸಂಬಂಧಪಟ್ಟವರು ಟ್ರೀ ಆಫೀಸರ್ ಕಡೆಹೋಗಿ ಅನುಮತಿ ಪಡೆಯಬೇಕಾಗುತ್ತದೆ. ಮಾನ್ಯ ಲಿಂಗಪ್ಪನವರೇ ಇವರನ್ನು ಮರಾಧಿಕಾರಿಗಳು ಎಂದು ಕರೆದಿದ್ದಾರೆ. ದಾಳಿಂಬೆ ಗಿಡಗಳನ್ನು ಸಹ ೧೫—೨೦ ವರ್ಷದ ನಂತರ ಕಡಿದು ಹೊಸ ಗಿಡಗಳನ್ನು ಬೆಳೆಸಬೇಕಾಗುತ್ತದೆ. ಆಗ ಮರಾಧಿಕಾರಿಗಳ ಅನುಮತಿ ಪಡೆಯಬೇಕಾಗುತ್ತದೆ, ಕೆಲವು ಹೂವಿನ ಗಿಡಗಳ

** Bill appended as Annexure to this volume.